# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ:2–11–2011ರಂದು ಕಾರ್ಯಪಾಲಕ ಅಭಿಯಂತರರು(ದಾಸರಹಳ್ಳಿ)ಕಚೇರಿಯನ್ನು ತಪಾಸಣೆ ನಡೆಸಿದ ನಡವಳಿಗಳು

ಹಾಜರಿದ್ದ ಸಮಿತಿ ಸದಸ್ಯರು

- ಶ್ರೀ.ಎ.ಎಲ್.ಶಿವಕುಮಾರ್ — ಅಧ್ಯಕ್ಷರು
- ಶ್ರೀಮತಿ ನೂರ್ ಜಹಾನ್ ಷರೀಫ್ — ಸದಸ್ಯರು
- ಶ್ರೀಮತಿ ಕ್ವೀನ್ ಎಲಿಜಬೆತ್ — ಸದಸ್ಯರು
- ಶ್ರೀ.ಜಿ.ಆನಂದ್ — ಸದಸ್ಯರು
- ಶ್ರೀಮತಿ ಎಂ.ಜೆ.ಜಯರತ್ನ — ಸದಸ್ಯರು

**ಕಾಮಗಾರಿ:–**

ಸ್ಥಾಯಿ ಸಮಿತಿಯ ವತಿಯಿಂದ ಕಾರ್ಯಪಾಲಕ ಅಭಿಯಂತರರು(ದಾಸರಹಳ್ಳಿ) ವಿಭಾಗದ ಕಚೇರಿಯನ್ನು ತಪಸಣೆ ನಡೆಸಲಾಯಿತು. 2009–10ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸಾಕಷ್ಟು ಆಕ್ಷೇಪಣೆ ಮತ್ತು ವಸೂಲಾತಿಗಳಿದ್ದರು ಸೂಕ್ತ ಕ್ರಮಕೈಗೊಳ್ಳುವಲ್ಲಿ ಅಲ್ಲಿನ ಸಿಬ್ಬಂದಿಗಳು ವಿಫಲರಾಗಿರುತ್ತಾರೆ.

1)ಸುಮಾರು 6,38,125–00ರೂಗಳಷ್ಟು ಮೊತ್ತದ ಡಿ.ಡಿ.ಗಳನ್ನು 2009ರಲ್ಲಿ ಟೆಂಡರ್ ಸಮಯದಲ್ಲಿ ಪಡೆದಿದ್ದು, ಸದರಿ ಡಿ.ಡಿ.ಗಳನ್ನು ಪಾಲಿಕೆಯ ಖಜಾನೆಗೆ ಜಮಾ ಮಾಡಿರುವುದಿಲ್ಲ, ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗುರುತಿಸಿ ಸೂಚಿಸಿದಾಗ ದಿನಾಂಕ:6–9–2011ರಂದು ಪಾಲಿಕೆಯ ಖಜಾನೆಗೆ ಜಮಾ ಮಾಡಿ ಪಾಲಿಕೆಗೆ ಆರ್ಥಿಕ ನಷ್ಟ ಉಂಟುಮಾಡಲಾಗಿರುತ್ತದೆ, ಈ ವಿಳಂಬದ ಕಾರಣ ಸುಮಾರು 1,27,625–00ಗಳಷ್ಟು ಬಡ್ಡಿಯು ಸಹ ನಷ್ಟವಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿ ಸಿಬ್ಬಂದಿಗಳಾದ ಶ್ರೀ.ಕೀರಾನಾಯಕ್, ಕಾರ್ಯಪಾಲಕ ಅಭಿಯಂತರರು, ಶ್ರೀ.ಸಂಗಪ್ಪ ಉಪಾಸೆ, ಸಹಾಯಕ ನಿಯಂತ್ರಕರು(ಹಣಕಾಸು) ಮತ್ತು ಲೆಕ್ಕ ಅಧೀಕ್ಷಕರುಗಳಾದ ಶ್ರೀ.ನಾಗರಾಜ್, ಶ್ರೀ.ಮಹಾದೇವು ರವರುಗಳ ಮೇಲೆ ಸೂಕ್ತ ಕ್ರಮ ಜರುಗಿಸಿ ಆರ್ಥಿಕ ನಷ್ಟವನ್ನು ವಸೂಲಿ ಮಾಡುವ ಬಗ್ಗೆ ಕ್ರಮಕೈಗೊಳ್ಳಲು ಆಯುಕ್ತರನ್ನು ಕೋರಿದೆ.

2)ಒಂದೇ ಡಿ.ಡಿಯನ್ನು ಒಂದಕ್ಕಿಂತ ಹೆಚ್ಚು ಟೆಂಡರ್‌ಗಳಿಗೆ ಇ.ಎಂ.ಡಿ.ಎಂದು ತೋರಿಸಿರುವುದೇ ಅಲ್ಲದೇ ಇ.ಎಂ.ಡಿ. ಪಡೆಯದೇ ಕಾಮಗಾರಿ ನೀಡಿರುವುದಾಗಿ 2009–10ನೇ ಸಾಲಿನ ಆಡಿಟ್ ಆಕ್ಷೇಪಣೆಯಲ್ಲಿ ಕಂಡುಬಂದಿದ್ದು, ಕಡತವನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ವಿಫಲರಾಗಿರುವುದರಿಂದ, ಸದರಿ ಕಾಮಗಾರಿಯನ್ನು ಅಸಿಂದುಗೊಳಿಸಿ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಆಯುಕ್ತರನ್ನು ಕೋರಿದೆ.

3) ಮಾರಾಟ ತೆರಿಗೆ ಇಲಾಖೆಗೆ ಸುಮಾರು ರೂ 1,30,87,469-00ಗಳ ಚೆಕ್ಕನ್ನು ನೀಡಿದ್ದು ಸದರಿ ಚೆಕ್ ಬೌನ್ಸ್ ಆಗಿದ್ದು ಈ ಬಗ್ಗೆ ಪ್ರಶ್ನಿಸಿದರೆ ಕಾರ್ಯಪಾಲಕ ಅಬಿಯಂತರರ ಲೆಕ್ಕದಲ್ಲಿದ್ದ ಮೊತ್ತವನ್ನು ಪರಿಶೀಲಿಸಿ ಮುಖ್ಯಲೆಕ್ಕಾಧಿಕಾರಿಗಳ ಕಚೇರಿಯಿಂದ ಎಲ್.ಓ.ಸಿ.ಪಡೆದ ನಂತರ ಚೆಕ್ ವಿತರಿಸಲಾಗಿತ್ತು, ಚೆಕ್ ವಿತರಿಸಿದ ನಂತರ ಸಿ.ಎ.ಓ.ಕಚೇರಿಯಿಂದ ಮೊತ್ತವನ್ನು ವರ್ಗಾವಣೆ ಮಾಡಿಕೊಂಡ ಪ್ರಯುಕ್ತ ಚೆಕ್ ಬೌನ್ಸ್ ಆಗಿದ್ದು ತದನಂತರ ಪತ್ರ ಬರೆದು ಕೋರಲಾಗಿದೆ ಎಂದು ಸಿಬ್ಬಂದಿಗಳು ತಿಳಿಸಿದರು.

ಈ ಬಗ್ಗೆ ಪರಿಶೀಲಿಸಿದಾಗ ಒಂದು ಭಾರಿ ಎಲ್.ಓ.ಸಿ. ನೀಡಿದ್ದರು ಸಹ ಸಿ.ಎ.ಓ.ಕಚೇರಿಯ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಹಣ ವಗಾವಣೆ ಮಾಡಿಕೊಂಡಿರುತ್ತಾರೆ. ಇದರಿಂದ ವಾಣಿಜ್ಯ ತೆರಿಗೆ ಇಲಾಖೆಯು ದಿನಾಂಕ:12/8/2011ರಂದು ನೋಟೀಸ್ ಜಾರಿ ಮಾಡಿ ಶೇಕಡ 1.5%ರಷ್ಟು ಬಡ್ಡಿ ಪಾವತಿಸಲು ಸೂಚಿಸಿರುತ್ತಾರೆ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿದ್ದು ಈ ರೀತಿ ಅಸಡ್ಡೆ ತೋರಿರುವ ಮುಖ್ಯ ಲೆಕ್ಕಾಧಿಕಾರಿ ಕಚೇರಿಯ ಸಿಬ್ಬಂದ್ದಿಯನ್ನು ಅಮಾನತ್ತಿನಲ್ಲಿಟ್ಟು ಕ್ರಮ ಜರುಗಿಸಲು ಆಯುಕ್ತರನ್ನು ಕೋರಿದೆ.

4)ದಿನಾಂಕ:15/5/2009ರಂದು ಆಕ್ಷಿಸ್ ಬ್ಯಾಂಕ್, ಜಯನಗರ ಶಾಖೆಯ ಚೆಕ್ ಸಂಖ್ಯೆ:375312 ಸಂಖ್ಯೆಯ ರೂ:7500-00ಗಳ ಚೆಕ್ಕನ್ನು ಪಡೆದು ಹಾಗೆಯೇ ಕಡತದಲ್ಲಿ ಇರುವುದನ್ನು ಗಮನಿಸಲಾಯಿತು, ಯಾವುದೇ ಕಾಮಗಾರಿಗೆ ಡಿ.ಡಿ.ಯನ್ನು ಪಡೆಯಬೇಕಾಗಿದ್ದು, ಚೆಕ್ಕನ್ನು ಪಡೆದು ಪಾಲಿಕೆಗೆ ನಷ್ಟ ಉಂಟು ಮಾಡಿರುವ ಹಿಂದಿನ ನಗದು ಗುಮಸ್ತರಾದ ಶ್ರೀಮತಿ ಮಂಜುಳ ರವರ ಮೇಲೆ ಸೂಕ್ತ ಕ್ರಮ ಜರುಗಿಸಲು ಕೋರಿದೆ.

5)ಲೆಕ್ಕ ಪರಿಶೋಧನಾಧಿಕಾರಿಗಳ ವಿಚಾರಣೆ ಸಂಖ್ಯೆ:23, ದಿ:2-9-2011ರ ಪತ್ರವನ್ನು ಗಮನಿಸಿದಾಗ ಗುತ್ತಿಗೆದಾರರು ಕೊಳವೆ ಬಾವಿ ಕೊರೆಯುವ ಸಂದರ್ಬದಲ್ಲಿ ವಿದ್ಯುತ್ ಸಂಪರ್ಕ ಠೇವಣಿ ಮಾಡಿರುವ ಬಿಲ್ಲುಗಳನ್ನೇ ಪಡೆಯದೇ ಸುಮಾರು 1,18,830-00ಗಳನ್ನು ಪಾವತಿಸಲಾಗಿದೆ, ಆದರೆ ಬಿಲ್ಲನ್ನು ಪರಿಶೀಲಿಸದೇ ಬಿಲ್ಲನ್ನು ಅಂಗೀಕರಿಸಿರುವ ಲೆಕ್ಕ ಅಧೀಕ್ಷಕರಾದ ಶ್ರೀಮತಿ ಮಂಜುಳ, ಶ್ರೀ.ನಾಗರಾಜು, ಶ್ರೀ ಮಹದೇವು ರವರುಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಲು ಕೋರಿದೆ.

6)ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿಯಮಾವಳಿಯಂತೆ ರಾಜಧನದ ರೂಪದಲ್ಲಿ ಕಟಾಯಿಸಬೇಕಾಗಿದ್ದ ಸುಮಾರು 30.00ಲಕ್ಷಗಳನ್ನು ಕಟಾವು ಮಾಡದೇ ಇರುವುದು ಕಂಡುಬಂದಿದ್ದು, ಸಂಬಂಧಪಟ್ಟ ಗುತ್ತಿಗೆದಾರರಿಂದ ಬಿಲ್ಲುಗಳಲ್ಲಿ ಲೆಕ್ಕಾಚಾರ ಮಾಡಿ ಕೂಡಲೇ ವಸೂಲಿ ಮಾಡುವುದು ತಪ್ಪಿದಲ್ಲಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವ ಕ್ರಮ ಜರುಗಿಸಲು ಸಮಿತಿಯು ಆಯುಕ್ತರನ್ನು ಕೋರಿದೆ.

7)ಸದರಿ ಕಚೇರಿಯ ಓಚರ್ ಸಂಖ್ಯೆ:13/11-5-2009ರಲ್ಲಿ Improvements and Asphalting of roads from NH4 to Widea poornapragna school ಕಾಮಗಾರಿಗೆ ಮೂಲ 25.00ಲಕ್ಷ ಅಂದಾಜನ್ನು ತಯಾರಿಸಿ ಜಮೀನಿನ ತಕರಾರು ಇದೆಯೆಂದು ಮೂಲ ಅಂದಾಜಿನ ಅಂಶಗಳನ್ನೇ ಬದಲಿ ಕಾಮಗಾರಿಗೆ ಅಳವಡಿಸಿ ಬಾಗಲಗುಂಟೆ ಮುಖ್ಯರಸ್ತೆಯ ಬಲಭಾಗದ

ಅಡ್ಡರಸ್ತೆಗಳಿಗೆ ಅಭಿವೃದ್ಧಿ ಹಾಗು ಡಾಂಬರೀಕರಣ ಮಾಡಲು ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮೋದನೆ ಪಡೆಯಲಾಗಿದ್ದು ಈ ನಿಯಮವನ್ನು ಉಲ್ಲಂಘಿಸಿ ರೂ:50.00ಲಕ್ಷಗಳ ಅಂದಾಜು ಪಟ್ಟಿ ತಯಾರಿಸಲಾಗಿದೆ. ಹಾಗು ಈ ಕಾಮಗಾರಿಗೆ ಸ.ಕಾ.ನಿ., ಗುಣನಿಯಂತ್ರಣ ವಿಭಾಗ ರವರು ಮೂಲ ಕಾಮಗಾರಿಯ ಹೆಸರನ್ನೇ ನಮೂದಿಸಿ ವರದಿ ನೀಡಿರುವುದರಿಂದ ಸದರಿ ಕಾಮಗಾರಿ ನಡೆದಿರುವ ಬಗ್ಗೆ ಹಾಗು ಗುಣನಿಯಂತ್ರಣ ವಿಭಾಗದಿಂದ ವರದಿ ನೀಡುವಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿರುವುದು ಮೇಲು ನೋಟಕ್ಕೆ ಬರುವುದರಿಂದ ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮಕೈಗೊಂಡು ವರದಿ ನೀಡಲು ಆಯುಕ್ತರನ್ನು ಕೋರಿದೆ.

7)ಕಚೇರಿಯಲ್ಲಿ ನಿಯಮಾವಳಿಯಂತೆ ನಿರ್ವಹಣೆ ಮಾಡಬೇಕಾದ ಸಿ. ರಿಜಿಸ್ಟರ್ ನಿರ್ವಹಣೆ ಮಾಡಿರುವುದಿಲ್ಲ, ಹಾಗು ಕಂಟ್ರಾಕ್ಟರ್ ರಿಜಿಸ್ಟರ್‌ಅನ್ನು ನಿರ್ವಹಿಸಿರುವುದಿಲ್ಲ. 2009–10ನೇ ಸಾಲಿನ ಟೆಂಡರ್ ಓಪನ್ ರಿಜಿಸ್ಟರ್ ಅನ್ನು ಸರಿಯಾಗಿ ನಿರ್ವಹಣೆ ಮಾಡದೇ ಸಾಕಷ್ಟು ಮಾಹಿತಿಗಳನ್ನು ನಮೂದು ಮಾಡದೇ ಇರುವುದರಿಂದ ಸ್ಪಷ್ಟ ಮಾಹಿತಿ ದೊರಕುತ್ತಿಲ್ಲ, ಹಾಗು ಕೆಲವು ಕಡೆಗಳಲ್ಲಿ ಯಾರೂ ದೃಡೀಕರಿಸಿಲ್ಲದಿರುವುದು ಕಂಡುಬಂದಿದೆ. ಇದಲ್ಲದೆ ನಗದು ಪುಸ್ತಕವನ್ನು ಸರಿಯಾಗಿ ನಿರ್ವಹಣೆ ಮಾಡದೇ ಸದರಿ ಪುಸ್ತಕವು ದಿನಾಂಕ:18/10/2011ಕ್ಕೆ ಅಂತ್ಯಗೊಂಡಿರುತ್ತದೆ, ಸಾಕಷ್ಟು ಕಡೆಗಳಲ್ಲಿ ಕಾರ್ಯಪಾಲಕ ಅಭಿಯಂತರರೇ ಸಹಿ ಮಾಡಿರುವುದಿಲ್ಲ

7)ವಲಯದ ಲೆಕ್ಕ ಪರಿಶೋಧನೆಗೆ ಸಂಬಂದಿಸಿದಂತೆ ಗಮನ ಹರಿಸಲು ಎ.ಸಿ.ಎಫ್.ರವರನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಈ ಬಗ್ಗೆ ಸಮಿತಿಯಿಂದ 2 ಭಾರಿ ಸಬೇ ನಡೆಸಿ ಆಡಿಟ್ ಆಕ್ಷೇಪಣೆಗೆ ಕಂಡಿಕೆವಾರು ಉತ್ತರಗಳನ್ನು ಒದಗಿಸಲು ಸೂಚಿಸಿದ್ದರು ಸಹ ಇದುವರೆವಿಗೂ ಯಾವುದೇ ಕ್ರಮಕೈಗೊಳ್ಳಲು ಎ.ಸಿ.ಎಫ್ ರವರು ವಿಫಲಗೊಂಡಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಸ್ಥಳದಲ್ಲಿಯೇ ಹಾಜರಿದ್ದ ಜಂಟಿ ಅಯುಕ್ತರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು,

ಹಾಗು ಒಂದು ದಿನದ ಒಳಗಾಗಿ ರಾಜಧನ ವಸೂಲಿ ಮಾಡಬೇಕಾಗಿರುವ ಗುತ್ತಿಗೆದಾರರ ವಿವರ ಮತ್ತು ಅವರಿಂದ ಬರಬೇಕಾದ ಮೊತ್ತದ ಮಾಹಿತಿಯನ್ನೊಳಗೊಂಡ ಪಟ್ಟಿಯನ್ನು ಸಮಿತಿಗೆ ಒದಗಿಸಲು ಹಾಗು ಆಡಿಟ್ ಆಕ್ಷೇಪಣೆಗಳಿಗೆ ಸಂಬಂದಿಸಿದ 2 ವರ್ಷಗಳಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ ಸಿಬ್ಬಂದಿಗಳ ವಿವರಗಳನ್ನು ಒದಗಿಸಲು ಎ.ಸಿ.ಎಫ್.ರವರಿಗೆ ಸೂಚಿಸಲಾಯಿತು.

**ಕಲ್ಯಾಣ:–**

ಸದರಿ ಕಚೇರಿಯಿಂದ ಸಾಕಷ್ಟು ಜನ ಕಲ್ಯಾಣ ಯೋಜನೆಗಳನ್ನು ಕೈಗೆತ್ತಿಕೊಂಡು ನಿರ್ವಹಣೆ ಮಾಡಿದ್ದು, ಈಬಗ್ಗೆ 2009–10ನೆ ಸಾಲಿನ ಆಡಿಟ್ ಆಕ್ಷೇಪಣೆಯಲ್ಲಿ ಸಾಕಷ್ಟು ನಿಯಮ ಉಲ್ಲಂಘನೆಯಾಗಿರುವುದು ಮೇಲು ನೋಟಕ್ಕೆ ಕಂಡುಬಂದಿದೆ, ಈ ಬಗ್ಗೆ ಸಂಬಂದಪಟ್ಟ ಕಡತಗಳನ್ನು ಒದಗಿಸಲು ಉಪ ಅಯುಕ್ತರಿಗೆ ಸೂಚಿಸಿದಾಗ ಕಂದಾಯ ಆದಿಕಾರಿ ಹುದ್ದೆಯು ಖಾಲಿ ಇದ್ದು ಗುಮಾಸ್ತರು ರಜೆಯಲ್ಲಿರುವುದಾಗಿ ಮಾಹಿತಿ ನೀಡಿ ಸಮಿತಿಗೆ ಯಾವುದೇ ಕಡತಗಳನ್ನು ಒದಗಿಸಲು ವಿಫಲರಾಗಿರುತ್ತಾರೆ. ಆಕ್ಷೇಪಣೆಯಲ್ಲಿರುವಂತೆ ಈ ಕೆಳಕಂಡಂತೆ ಸಾಕಷ್ಟು ನ್ಯೂನತೆಗಳಿರುತ್ತವೆ.

ಎ)ಸವಿತಾ ಸಮಾಜದವರಿಗೆ ಬಾರ್ ಬಾರ್ ಕಿಟ್ ಒದಗಿಸಲು ತಲಾ 5000–00ರಂತೆ 160 ಜನರಿಗೆ ರೂ:8.00ಲಕ್ಷಗಳನ್ನು ಮೀಸಲಿರಿದ್ದು, ಇದನ್ನು ಮೀರಿ ತಲಾ 28000–00ರ ದರ ನಿರ್ದರಿಸಿ, 28.00ಲಕ್ಷಗಳಿಗೆ ವೋಚರ್ ಸಂಖ್ಯೆ:8/17/2/2009ರಲ್ಲಿ ನೀಡಲಾಗಿದೆ. ಹೆಚ್ಚುವರಿಯಾಗಿ 100 ಸಂಖ್ಯೆಗೆ ಮತ್ತೊಮ್ಮೆ ವೋಚರ್ ಸಂಖ್ಯೆ:24/18–6–2009ರಲ್ಲಿ 28.00ಲಕ್ಷಗಳನ್ನು ಪಾವತಿಸಿರುವುದೇ ಅಲ್ಲದೇ ವಿತರಿಸಿರುವ ಫಲಾನುಭವಿಗಳ ವಿವರಗಳನ್ನು ಇಡಲು ವಿಫಲರಾಗಿರುವುದು ವರದಿಯಿಂದ ಗೋಚರವಾಗುತ್ತಿದೆ.

ಬಿ)2008–2009ರಲ್ಲಿ ಶೃಂಗಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ರೂ:10.00ಲಕ್ಷಗಳನ್ನು ಮೀಸಲಿಟ್ಟು ಟೆಂಡರ್ ಕರೆದು ನಿಯಮಾವಳಿಯನ್ನು ಮೀರಿ ಹೆಚ್ಚು ಮೊತ್ತ ನಮೂದಿಸಿರುವ ಟೆಂಡರ್‌ದಾರರನ್ನು ಆಯ್ಕೆ ಮಾಡಿ ಪಾಲಿಕೆಗೆ ನಷ್ಟ ಉಂಟು ಮಾಡಿರುವುದು ಹಾಗು ಫಲಾನುಭವಿಗಳ ವಿವರಗಳನ್ನು ಇಡಲು ವಿಫಲವಾಗಿರುವುದು ಆಡಿಟ್ ವರದಿಯಿಂದ ಗೋಚರವಾಗುತ್ತಿದೆ.

ಸಿ)2009–10ನೇ ಸಾಲಿನಲ್ಲಿ ಲಘು ವಾಹನ ಚಾಲನಾ ತರಬೇತಿ ನೀಡಿರುವ ಫಲಾನುಭವಿಗಳ ಹೆಸರಿಗೂ ಡಿ.ಎಲ್.ವಿತರಿಸಿರುವ ಹೆಸರುಗಳು ತಾಳೆಯಾಗುತ್ತಿಲ್ಲದಿರುವುದು ವರದಿಯಿಂದ ಕಂಡುಬಂದಿರುತ್ತದೆ. ಇದರಿಂದ ತರಬೇತಿ ಪಡೆದಿರುವ ಫಲಾನುಭವಿಗಳು ಯಾರೆಂಬುದು ಗುರುತಿಸಲು ಸಾಧ್ಯವಾಗದ ಕಾರಣ ಪಾಲಿಕೆಗೆ ಸಾಕಷ್ಟು ಆರ್ಥಿಕ ನಷ್ಟ ಉಂಟಾಗುವ ಸಂಭವ ಇರುತ್ತದೆ.

ಡಿ)ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ತರಬೇತಿಯನ್ನು ನೀಡಲು ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಿ ವೋಚರ್ ಸಂಖ್ಯೆ:18/14–5–2009ರಲ್ಲಿ ರೂ: 29.00ಲಕ್ಷಗಳನ್ನು ನೀಡಿದ್ದು, ಬಿ.ಬಿ.ಎಂ.ಪಿ.ಯೊಂದಿಗೆ ಮಾಡಿಕೊಂಡಿರುವ ಒಪ್ಪಂದ ಪತ್ರ ಪರಿಪೂರ್ಣವಾಗಿಲ್ಲದೇ ಇರುವುದು ಮತ್ತು ಷರತ್ತುಗಳನ್ನು ಉಲ್ಲಂಘನೆ ಮಾಡಿ ಫಲಾನುಭವಿಗಳ ಅರ್ಜಿಗಳು, ಫಲಾನುಭವಿಗಳ ಹಾಜರಿ ಪುಸ್ತಕ, ತರಬೇತಿಗೆ ಸಂಬಂಧಿಸಿದಂತೆ ಪರೀಕ್ಷೆ ನಡೆದಿರುವ ಮಾಹಿತಿಗಳು ಇಲ್ಲದಿರುವುದು ತರಬೇತಿಗೆ 3 ತಿಂಗಳ ಕಾಲಾವಧಿ ಇದ್ದರು ಸಹ ಅವಧಿ ಮುಗಿಯುವ ಮುನ್ನವೇ ಬಿಲ್ಲು ಪಾವತಿಯಾಗಿರುವುದು ಕಂಡುಬಂದಿರುವುದರಿಂದ ಸುಮಾರು 3820 ಜನರಿಗೆ ತರಬೇತಿಯನ್ನು ಯಾವ ಸ್ಥಳದಲ್ಲಿ ನೀಡಲಾಗಿದೆ ಎಂಬುದರ ವಿವರಗಳು ಲಭ್ಯವಿರುವುದಿಲ್ಲ.

ಇ)ಬಿ.ಪಿ.ಓ. ತರಬೇತಿ ನಿಡುವಲ್ಲಿಯು ಸಹ ಸಾಕಷ್ಟು ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಲೆಕ್ಕ ಆಕ್ಷೇಪಣೆಯಿಂದ ಕಂಡುಬರುತ್ತಿದ್ದು, 2008–09ನೇ ಸಾಲಿನಲ್ಲಿ 65 ಲಕ್ಷ ನಿಗದಿಪಡಿಸಿದ್ದರೆ ಸುಮಾರು 93.50 ಲಕ್ಷಗಳನ್ನು ವೆಚ್ಚ ಮಾಡಿದ್ದು ಸುಮಾರು 2941 ಫಲಾನುಭವಿಗಳನ್ನು ಆಯ್ಕೆ ಮಾಡಿರುವ ವಿಳಾಸ ವಿವರಗಳಾಗಲೀ ಅಥವಾ ಅರ್ಜಿ ಫಾರಂಗಳಾಗಲೀ, ತರಬೇತಿ ನೀಡಿದ ದಿನಾಂಕಗಳಾಗಲೀ ಯಾವುದೂ ಇಲ್ಲದಿರುವುದು, ಸಾಮಥ್ಯಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ ನೀಡಿರುವುದು ಕಂಡುಬಂದಿದೆ. ಬಯೋಮೆಟ್ರಿಕ್ ಹಾಜರಾತಿ ನಿರ್ವಹಿಸುವ ಪದ್ಧತಿಯನ್ನು ಕೈಬಿಟ್ಟಿರುವುದೇ ಅಲ್ಲದೇ ಹಾಜರಿಯನ್ನು ಇಟ್ಟಿರುವುದಿಲ್ಲ.

ಎಫ್)2008-09ನೇ ಸಾಲಿನ ಆಯವ್ಯಯದಲ್ಲಿ 100 ಜನರಿಗೆ ದೋಬಿ ಕಿಟ್ ನೀಡಲು ರೂ:5 ಲಕ್ಷಗಳನ್ನು ಅನುಮೋದಿಸಿದ್ದು ಟೆಂಡರ್ ತೆರೆದು ತಲಾ ಒಂದಕ್ಕೆ 16900-00ಗಳನ್ನು ನಿರ್ದರಿಸಿ ದಿನಾಂಕ:19-12-2008ರಲ್ಲಿ 159ಜನಕ್ಕೆ ಕಾರ್ಯಾದೇಶವನ್ನು ನೀಡಿ ರೂ:26.86ಲಕ್ಷ ಬಿಲ್ಲನ್ನು ನೀಡಲಾಗಿದೆ, ಪುನ: 175 ಸಂಖ್ಯೆಯ ಕಿಟ್ಟನ್ನು ಪಡೆದು ದಿನಾಂಕ:18-6-2009ರಲ್ಲಿ 29-57ಲಕ್ಷ ಪಾವತಿ ಮಾಡಿರುವುದೇ ಅಲ್ಲದೇ 2 ಆಥಿಕ ವರ್ಷಕ್ಕೆ ಒಬ್ಬ ಟೆಂಡರ್‌ದಾರರನ್ನೇ ಮುಂದುವರೆಸಿ ನಿಯಮ ಉಲ್ಲಂಘನೆ ಮಾಡಲಾಗಿದೆ, ಹಾಗು ಪ್ರತಿ ಕಿಟ್ಟಿನಲ್ಲಿ ಇರಬೇಕಾದ ಪರಿಕರಗಳ ಅಂದಾಜನ್ನು ಮೊದಲು ಅಂದಾಜಿಸಿರುವುದಿಲ್ಲ ಹಾಗು ರೂ:5.00ಲಕ್ಷ ಅಂದಾಜಿಗೆ ಸುಮಾರು 56.45ಲಕ್ಷ ವೆಚ್ಚ ಮಾಡಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದಿದೆ.

ಜಿ)ಸ್ಪರ್ದಾತ್ಮಕ ಪರೀಕ್ಷೆಗಳಲ್ಲಿ ಹಾಜರಾಗುವ ಅಬ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಗಾಗಿ ಸುಮಾರು 2009-10ನೇ ಸಾಲಿನಲ್ಲಿ ಸುಮಾರು 1.07ಕೋಟಿ ರೂಗಳನ್ನು ಖರ್ಚು ಮಾಡಲಾಗಿದೆ ಇಲ್ಲಿಯೂ ಸಹ ಟೆಂಡರ್ ಕರೆಯುವಲ್ಲಿ ನಿಯಮ ಉಲ್ಲಂಘಿಸಲಾಗಿದೆ, ಟಿ.ವಿ.ಮೊಬೈಲ್ ರಿಪೇರಿ ತರಬೇತಿಗೆ ಫಲಾನುಭವಿಗಳನ್ನು ಗುರ್ತಿಸಿ ಬಿಲ್ಲು ನೀಡುವಾಗ ಸುಮಾರು 2160-00ಗಳನ್ನು ಹೆಚ್ಚುವರಿ ನೀಡಿರುವುದು ಸಹ ಕಂಡುಬಂದಿದೆ.

2009-10ನೇ ಸಾಲಿನಲ್ಲಿ ಸಾಕಷ್ಟು ಆಕ್ಷೇಪಣೆಗಳನ್ನು ಮಾಡಿದ್ದು ದಾಸರಹಳ್ಳಿ ವಲಯದ ಕಲ್ಯಾಣ ಶಾಖೆಯಿಂದಲೇ ಸುಮಾರು 2.34ಕೋಟಿ ರೂಗಳ ಆಕ್ಷೇಪಣೆ ಮತ್ತು ರೂ:10.07ಲಕ್ಷಗಳಷ್ಟು ವಸೂಲಿ ಮಾಡಬೇಕಾಗಿರುವುದರಿಂದ ಈ ಕೂಡಲೇ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಆರೋ ಪಣೆ ಪಟ್ಟಿ ಹೊರಡಿಸಿ ಸೂಕ್ತ ಕ್ರಮಜರುಗಿಸಲು ಕೊರಿದೆ.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: :ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಅಪರ ಆಯುಕ್ತರು(ಹಣಕಾಸು)ರವರಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಮುಖ್ಯ ಲೆಕ್ಕಾಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.